ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಬಾಗೇಪಲ್ಲಿ

C.C. 74/2020 CW: 5 P.W.4

| | | |
|---|---|---|
| ಸಾಕ್ಷಿದಾರರ ಹೆಸರು | ಃ | ರಮೇಶ ಬಾಬು |
| ತಂದೆ/ಗಂಡನ ಹೆಸರು | ಃ | ಲೇಟ್ ಆರ್ ವೆಂಕಟರವಣಪ್ಪ |
| ವಯಸ್ಸು | ಃ | 62 ವರ್ಷ |
| ವೃತ್ತಿ | ಃ | ನಿವೃತ್ತ ಅಬಕಾರಿ ನಿರೀಕ್ಷಕರು |
| ವಾಸಸ್ಥಳ | ಃ | ಬೆಂಗಳೂರು |

**ಪ್ರಮಾಣೀಕರಿಸಲಾದ ದಿಃ 26.12.2023**

**ಮುಖ್ಯ ವಿಚಾರಣೆ ಃಃ ಸಸಅ ರವರಿಂದಃ**

2008 ರಿಂದ 30.06.2021 ರವರೆಗೆ ಅಬಕಾರಿ ನಿರೀಕ್ಷಕರಾಗಿ ಬಾಗೇಪಲ್ಲಿ , ಪೋಲೀಸ್ ಠಾಣೆಯಲ್ಲಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ಚಾಸಾ 4 ರವರಿಂದ ಪ್ರಕರಣ ಕಡತವನ್ನು ಪಡೆದುಕೊಂಡು ವಾಹನದ ಮಾಲೀಕರ ಮಾಹಿತಿ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನೀಡಿರುತ್ತೇವೆ. B Extract ಅನ್ನು ಪಡೆದಿರುತ್ತೇನೆ. ನೋಟೀಸ್ ಅನ್ನು ನಿಪಿ 2 ಎಂದು, ಸಾಕ್ಷಿ ಯ ಸಹಿಯನ್ನು ನಿಪಿ 2 (ಎ) ಎಂದು ಗುರುತಿಸಲಾಯಿತು. B Extract ಅನ್ನು ನಿಪಿ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು.

2. ದಿಃ 22.08.2019 ರಂದು ವಾಹನದ ಮಾಲೀಕರಿಗೆ ವಿಚಾರಣೆ ನೋಟೀಸ್ ನೀಡಿರುತ್ತೇನೆ. ಅದನ್ನು ನಿಪಿ 4 ಎಂದು, ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ನಂತರ ಅವರ ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ಅಂತಿಮ ವರದಿ ಸಲ್ಲಿಸಿದ್ದೇನೆ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ** ಃ- ಎ. ಎನ್ ರವರಿಂದ

ಬಿಳಿ ಬಣ್ಣ ದ ಕ್ಯಾನ್ ಬಾಗೇಪಲ್ಲಿ ವಲಯ ಕಛೇರಿಯಲ್ಲಿ ಇರುತ್ತದೆ. ವಾಹನ ಕೂಡ ಅಲ್ಲೆ ಇರುತ್ತದೆ. ಅವುಗಳು ಅಬಕಾರಿ ನಿರೀಕ್ಷಕರ ಕಛೇರಿಯಲ್ಲಿ ಇವೆ. ಆ ದಿನ ಅಬಕಾರಿ ನಿರೀಕ್ಷಕರ ಯಾರು ಇದ್ದರು ಎಂದು ಹೇಳಲಾಗುವುದಿಲ್ಲ. ದಿಃ 18.05.2019 ರಂದು ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುತ್ತಾರೆ. ದಿಃ 17.03.2019 ರಿಂದ 18.05.2019 ರವರೆಗೆ ಸ್ಯಾಂಪಲ್ ಬಾಟಲ್ ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಏಕೆ ವಿಳಂಬ ವಾಗಿರುತ್ತದೆ ಎಂದು ಮಾಹಿತಿ ಸಂಗ್ರಹಿಸಿದ್ದೀರಾ ಎಂದರೆ ಆ ಸಮಯದಲ್ಲಿ ಲೋಕಸಭಾ ಚುನಾವಣೆ ಇರುವುದರಿಂದ ವಿಳಂಬವಾಗಿರುತ್ತದೆ.

2. ಸ್ಯಾಂಪಲ್ ಮತ್ತು ಜಪ್ತು ಪಡಿಸಿಕೊಂಡು ಮಾಲನ್ನು 1 ತಿಂಗಳ ಕಾಲ ಕೆಡದೆ ಇಡಲು ನಮ್ಮ ಬಳಿ ಯಾವುದೇ ಸಲಕರಣೆ ಇರುವುದಿಲ್ಲ. ಒಂದು ತಿಂಗಳ ನಂತರ ಸ್ಯಾಂಪಲ್ ಅನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸದರೆ ಅದರ ಗುಣಮಟ್ಟ ಹಾಳಣಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾನು ಚಾಸಾ 4 ರವರಿಂದ ಕಡತವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. 2019 ಲೋಕಸಭಾ ಚುನಾವಣೆ ಸುತ್ತೋಲೆಯನ್ನು ನ್ಯಾಯಾಲಯಕ್ಕೆ ಹಾಜುರಪಡಿಸಿಲ್ಲ. ಸುಳ್ಳು ಅಂತಿಮ ವರದಿ ಸಲಿಲಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಜೆಎಂಎಫ್‌ಸಿ ., ಬಾಗೇಪಲ್ಲಿ